(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಜಿ ಎನ್ ವಕೀಲರಿಂದಃ-

ನಿಪಿ-19 ರ ಡಿಕ್ರಿ ಪ್ರತಿಯ ಶೆಡ್ಯೂಲಿನ ಕ್ರಮ ಸಂಖ್ಯೆಃ 5 ರಲ್ಲಿ ಸರ್ವೆ ನಂ. 102 ಬಿ, 94 ಸೆಂಟ್ಸ ನಮೂದು ಇದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 102/ಡಿ ಅಂತಾ ಆಗಿದೆ ಎಂದರೆ ಸರಿ. ಸರ್ವೆ ನಂ.102 ಬಿ ಅದರಲ್ಲಿ 47 ಸೆಂಟ್ಸ ಜಮೀನನ್ನು ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ನಮ್ಮ ತಂದೆಯವರ ಹೆಸರಿಗೆ ಮಾಡಿಸಿಕೊಂಡಿರುತ್ತೇನೆಂದರೆ ಸಾಕ್ಷಿಯು ಕೊರ್ಟ ಡಿಕ್ರಿ ಪ್ರಕಾರ ಏನು ಆದೇಶ ಇದೆಯೋ ಆ ರೀತಿ ಮಾಡಿಸಿಕೊಂಡಿರುತ್ತೇನೆ ಎನ್ನುತ್ತಾರೆ. ಸದರಿ 94 ಸೆಂಟ್ಸ ಜಮೀನು 74 ಸೆಂಟ್ಸ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಹನುಮಂತಪ್ಪ ಇವರಿಗೆ ಸದರಿ ಸರ್ವೆ ನಂ.102 ಬಿ ದಲ್ಲಿ 20 ಸೆಂಟ್ಸ ಜಮೀನು ಕಡಿಮೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರ ತಂದೆ ಹೆಸರು ಕುಂಬಾರ ಯಂಕಪ್ಪ ಅವರಿಗೆ ಒಟ್ಟು ಎಷ್ಟು ಎಕರೆ ಜಮೀನಿತ್ತು



ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಮ್ಮ ತಂದೆಯವರಿಗೆ ಎಷ್ಟು ಎಕರೆ ಜಮೀನು ಬಂತು ಎಂದರೆ ಸಾಕ್ಷಿಯು ಸುಮಾರು 6.75 ಎಕರೆ ಜಮೀನು ಬಂದಿದೆ ಎನ್ನುತ್ತಾರೆ.

ನಾವು ಶೆಟ್ರು ಇವರಿಗೆ ಒಂದು ಮನೆಯನ್ನು ಮಾರಾಟ ಮಾಡಿರುತ್ತೇವೆಂದರೆ ಸರಿ. ನಾವು ನ್ಯಾಯಾಲಯದ ಡಿಕ್ರಿಯಂತೆ ಖಾತೆ ಬದಲಾವಣೆಯನ್ನು ಮಾಡಿಸಿಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ಮನೆಯ ಜಾಗದ ಡೋರ್ ನಂಬರುಗಳು ನನಗೆ ನೆನಪಿಲ್ಲ. ಮನೆ ನಂ.69 ನಮ್ಮ ತಂದೆಯವರಿಗೆ ಬಂದಿದೆ ಎಂದರೆ ಸರಿ. ಡೋರ್ ನಂ.69 ರ ಉತ್ತರ ದಿಕ್ಕಿಗೆ ಪ್ರತಿವಾದಿಯರ ಹಳೇ ಮನೆ ಇದೆ ಎಂದರೆ ಸರಿ. ಅದೇ ರೀತಿ ಡಿಕ್ರಿಯಂತೆ ಮನೆ ನಂ.70 ಪ್ರತಿವಾದಿಯರ ತಂದೆಗೆ ಬಂದಿರುತ್ತದೆಂದರೆ ಸರಿ. ಸದರಿ ಡಿಕ್ರಿಯಲ್ಲಿ ಮನೆ ನಂ. 70 ರ ದಕ್ಷಿಣ ದಿಕ್ಕಿಗೆ ಹನುಮಂತಪ್ಪ ಇವರ ಬಯಲು ಜಾಗ ಅಂತಾ ನಮೂದು ಇದ್ದರೂ ಸಹಾ ಅದನ್ನು ನಾವು ಬಿಡದೇ ಖಾತೆ ಮಾಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಈ ವಿಚಾರಕ್ಕಾಗಿ ಪ್ರತಿವಾದಿಯರು ಖಾತೆ ಬದಲಾವಣೆ ಕುರಿತು ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ಸರ್ವೆ ಹದ್ದುಬಸ್ತು ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಮ್ಮ ತಂದೆಯವರಿಂದ ನೀವು ಯಾವಾಗ ವಿಭಾಗ ಮಾಡಿಸಿಕೊಂಡ್ರಿ ಎಂದರೆ ಸಾಕ್ಷಿಯು ಸನ್ 2018 ಮೇ ತಿಂಗಳಲ್ಲಿ ತಹಶೀಲ್ದಾರ್ ರವರ ಆದೇಶದಂತೆ ನಮ್ಮ ಹೆಸರಿಗೆ ಖಾತೆಯಾಗಿದೆ ಎನ್ನುತ್ತಾರೆ. ಖಾತೆ ಬದಲಾವಣೆಗೆ ಕುರಿತು ತಕರಾರು ಹಾಕಿರುವುದರಿಂದ ತಹಶೀಲ್ದಾರ್ ರವರು ಆದೇಶ ಮಾಡಿರುತ್ತಾರೆ. ಸದರಿ ತಕರಾರನ್ನು ಪ್ರತಿವಾದಿಯರು ಸಲ್ಲಿಸಿದ್ದರು. ನಿಪಿ-10 ರಂತೆ ಸದರಿ ಮ್ಯುಟೇಶನ್ ಗಾಗಿ ತಹಶೀಲ್ದಾರ್ ನ್ಯಾಯಾಲಯದಲ್ಲಿ ತಕರಾರನ್ನು ಸಲ್ಲಿಸಿದವರು ಕುಂಬಾರ ಶಿವಲಿಂಗಮ್ಮ ಎಂದರೆ ಸರಿ. ಸದರಿ ಕುಂಬಾರ್ ಶಿವಲಿಂಗಮ್ಮ ಇವರು ಹನುಮಂತಪ್ಪ ಇವರ ಎರಡನೇ ಹೆಂಡತಿ ಎಂದರೆ ಸರಿ. ಸರ್ವೆ ನಂ.99, 100, 117 ಬಿ, 101 ಸಿ ಮತ್ತು 102 ಬಿ ಈ ಐದು ಜಮೀನುಗಳ ಪೂರ್ವ ದಿಕ್ಕಿಗೆ ನಮ್ಮ ತಂದೆಯವರಿಗೆ ಪಶ್ಚಿಮ ದಿಕ್ಕಿಗೆ ಹನುಮಂತಪ್ಪ ಇವರಿಗೆ ಹಿಸ್ಸೆ ನೀಡಿರುತ್ತಾರೆಂದರೆ ಸರಿ. ಸದರಿ ಪಶ್ಚಿಮ ದಿಕ್ಕಿಗೆ ಬಂದಿರುವಂತಹ ಜಮೀನುಗಳಲ್ಲಿ ಶಿವಲಿಂಗಮ್ಮ ಮತ್ತು ಶಿವಪ್ಪ ಇವರು ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ಶಿವಪ್ಪರವರು ಸಾವಧೀನದಲ್ಲಿರುವ ವಿಚಾರ ನನಗೆ ಗೊತ್ತಿಲ್ಲವೆನ್ನುತ್ತಾರೆ. ಸದರಿ ಜಮೀನಿನಲ್ಲಿ ಅವರೂ ಸಹಾ ಸ್ವಾಧೀನದಲ್ಲಿರುವುದರಿಂದ ಅವರು ಈ ದಾವೆಯಲ್ಲಿ ಅವಶ್ಯಕ ಪಕ್ಷಕಾರರಾಗುತ್ತಾರೆಂದರೆ ಸರಿಯಲ್ಲ.



3 ನೇ ಪ್ರತಿವಾದಿಯು ಗುಲಬರ್ಗಾದಲ್ಲಿ ವಿ ಎ ಅಂತಾ ಕೆಲಸ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ಅವರು ಊರಿನಲ್ಲಿ ಇರುವುದಿಲ್ಲ ಅವರು ಕೆಲಸದ ನಿಮಿತ್ತ ವಿಜಾಪುರದಲ್ಲಿ ವಾಸವಾಗಿರುತ್ತಾರೆ ಆದರೂ ಸಹಾ ಅವರಿಗೆ ವಿನಾಕಾರಣ ತೊಂದರೆ ಕೊಡಲು ಈ ದಾವೆಯಲ್ಲಿ ಸೇರಿಸಿರುತ್ತೀರಿ ಎಂದರೆ ಸರಿಯಲ್ಲ. ಆದ್ದರಿಂದ ಅವರ ವಿರುದ್ದ ಯಾವುದೇ ವ್ಯಾಜ್ಯಕಾರಣ ಉಂಟಾಗಿಲ್ಲವೆಂದರೆ ಸರಿಯಲ್ಲ.

ಈ ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಶಿವಲಿಂಗಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆಯವರು ಶಿವಪ್ಪ, ಶಿವಲಿಂಗಪ್ಪ ಇವರ ಮೇಲೆ ವಿನಾಕರಣ ದಾವೆಗಳನ್ನು ಸಲ್ಲಿಸಿದ್ದರು ಅದೇ ರೀತಿ ನಾವು ಅವರ ಮೇಲೆ ದಾವೆಗಳನ್ನು ಸಲ್ಲಿಸುತ್ತಿದ್ದೇನೆಂದರೆ ಸರಿಯಲ್ಲ. ಹೆಚ್ಚುವರಿ ಜಮೀನಿನ ಸ್ವಾಧೀನವನ್ನು ನಾವು ಪಡೆದಿರುವುದರಿಂದ ವಿನಾಕಾರಣ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ದಾಖಲಿಸಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿಯು ನಮಗೆ ಯಾವುದೇ ರೀತಿಯಿಂದ ತೊಂದರೆ

ಕೊಟ್ಟಿಲ್ಲ ಶಿವಪ್ಪ ಇವರು ಮನೆಯ ವಿಚಾರಕ್ಕಾಗಿ ತೊಂದರೆ ಕೊಟ್ಟಿದ್ದರಿಂದ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ